ಪಿ. ಡಬ್ಲ್ಯೂ ಃ 1

**ಸಾಕ್ಷಿಗೆ ದಿನಾಂಕ 27.06.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ತೀರ್ಪುಋಣಿ ಪರ ಶ್ರೀ ವಕೀಲರಿಂದ**

ತೀರ್ಪು ಋಣಿ ದಾರರು ದಾವಾ ಸ್ವತ್ತಿಗೆ ತೊಂದರೆ ನೀಡಿ ಗಲಾಟೆ ಮಾಡಿದ್ದರಿಂದ ಪ್ರಸ್ತುತ ದಾವೆ ಸಲ್ಲಿಸಿರುತ್ತೇನೆ. ತೀರ್ಪು ಋಣಿ ದಾರರು ಡಿಮಾಂಡ್ ರಿಜಿಸ್ಟರ್ ನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ಸದರಿ ಜಾಗ ತಮಗೆ ಸೇರಿದ್ದು ಎಂದು ಗಲಾಟೆ ಮಾಡಲು ಬಂದಿದ್ದರು. ಗ್ರಾಮಠಾಣಾ ಸ್ವತ್ತು ದಾವೆ ಸಲ್ಲಿಸಿಸುವ ಪೂರ್ವದಲ್ಲಿಯೇ ತೀರ್ಪು ಋಣಿ ದಾರರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ತೀರ್ಪು ಋಣಿ ದಾರರು ಸರ್ವೆ ಮಾಡಿಸಿದಾಗ ನಮ್ಮ ಜಮೀನಿನ ಪೂರ್ವಕ್ಕೆ ಗ್ರಾಮಠಾಣಾ ಸ್ವತ್ತು ಇದೆ ಎಂದು ವರದಿ

ನೀಡಿರುತ್ತಾರೆ ಎಂದರೆ ಸರಿ. ನಮ್ಮ ಸ್ವತ್ತು ಹಾಗೂ ಗ್ರಾಮಠಾಣಾ ಸ್ವತ್ತಿನ ಮದ್ಯದಲ್ಲಿ ಕಲ್ಲು ಕಂಬ ಇದೆ ಎಂದರೆ ಸರಿ. ಸಾಕ್ಷಿ ಒಂದು ಭಾವ ಚಿತ್ರಗಳನ್ನು ತೋರಿಸಲಾಗಿ ದಾವೆ ಡಿಕ್ರಿ ಆಗುವ ಪೂರ್ವದಲ್ಲಿಯೇ ಭಾವ ಚಿತ್ರದಲ್ಲಿ ಕಾಣುವ ಕಲ್ಲು ಕಂಬ ಇತ್ತು ಎಂದರೆ ಸರಿಯಲ್ಲ, ಗಲಾಗೆ ಮಾಡಿ ತೀರ್ಪು ಋಣಿ ದಾರರು ಇತ್ತಿಚೆಗೆ ಕಲ್ಲು ಕಂಬ ನೆಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕಲ್ಲು ಕಂಬ ಇತ್ತಿಚೆಗೆ ನೆಟ್ಟಿರುತ್ತಾರರೆ ಎಂದುಸುಳ್ಳು ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ಸದರಿ ಕಲ್ಲು ಕಂಬದ ಸುತ್ತಲು ಇರುವ ತಂತಿಯನ್ನು ನಾನು ತೆರುವು ಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತಂತಿಯನ್ನು ತೆರವು ಗೊಳಿಸಿದ್ದರಿಂದ ತೀರ್ಪು ಋಣಿ ದಾರರು ತಂತಿ ತೆರವು ಮಾಡಬೇಡಿ ಎಂದು ಹೇಳಿದಾಗ ನಾನು ಅವರೊಂದಿದಗೆ ಗಲಾಟೆ ಮಾಡಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಧರ್ಮಾಪುರ ಗ್ರಾಮದಲ್ಲಿ ಗ್ರಾಮ ಠಾಣಾದಲ್ಲಿ ನನಗೆ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 166/3 ಎ, 6 ½ ಗುಂಟೆ ಜಮೀನಿನ ಪರ್ವದಲ್ಲಿ ನನಗೆ ಯಾವುದೇ ಗ್ರಾಮ ಠಾಣಾ ಜಮೀನು ಇಲ್ಲ ಎಂದರೆ ಸರಿ. ನಾವು ತೀಪ್ರು ಋಣಿ ದಾರರು ಕಲ್ಲು ಕಬಂದ ತಂತಿಗಳನ್ನು ಕತ್ತಿದ್ದರಿಂದ ನನ್ನ ವಿರುದ್ದ ದೂರು ನೀಡಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವೆ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ, ಸಾಕ್ಷಿ ಸುಳ್ಳು ದಾವೆ ಸಲ್ಲಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಖಾತೆ ಮಾಡಿಕೋಡಿ ಎಂದು ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೇನು ಎಂದರೆ ಸರಿಯಲ್ಲ ಸದರಿ ಅರ್ಜಿಗೆ ತೀರ್ಪು ಋಣಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಗ್ರಾಮ ಠಾಣಾ ಸ್ವತ್ತಿಗೆ ಸಂಬಂಧಿಸಿದಂತೆ ತೀರ್ಪು ಋಣಿ ದಾರರ ವಿರುದ್ದ ಯಾವುದೇ ಆದೇಶ ಆಗಿಲ್ಲ ಎಂದರೆ ಸರಿ. 2000 ನೇ ಇಸವಿಯಲ್ಲಿ ತೀರ್ಪು ಋಣಿ ದಾರರು ನಮ್ಮ ಸ್ವಾಧೀನಕ್ಕೆ ತೊಂದರೆ ನೀಡಿರುತ್ತಾರೆ. ತೀರ್ಪು ಋಣಿ ದಾರರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದನ್ನು ಜಯಶಂಕರ ಹಾಗೂ ಸುನೀಲ್ ರವರು ನೋಡಿರುತ್ತಾರೆ. ಜಯಶಂಕರ ಹಾಗೂ ಸುನೀಲ್ ರವರ ಮನೆಯ ನಮ್ಮ

ಮನೆಯ ಅಕ್ಕ - ಪಕ್ಕದಲ್ಲಿಯೇ ಇದೆ. ತೀರ್ಪು ಋಣಿ ದಾರರು ದಾವಾ ಸ್ವತ್ತಿಗೆ ಯಾವುದೇ ತೊಂದರೆ ಮಾಡಿಲ್ಲ, ಅತಿ ಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ಜಯಶಂಕರ ಹಾಗೂ ಸುನೀಲ್ ರವರು ತೀರ್ಪು ಋಣಿ ದಾರರ ದಾವಾ ಸ್ವತ್ತಿಗೆತೊಂದರೆ ನೀಡಿರುವುದನ್ನು ನೋಡಿರುತ್ತಾರೆ ಎಂದು ಅರ್ಜಿಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಹದ್ದು ಬಸ್ತು ಮಾಡಿಸಿಲ್ಲ. ನಮ್ಮ ಜಮೀನಿನ ಪೂರ್ವದಲ್ಲಿ ಗ್ರಾಮ ಠಾಣಾ ಸ್ವತ್ತು ಎಂದೆ ಇದೆ ಎಂದು ಹದ್ದು ಬಸ್ತು ನಲ್ಲಿ ಗೊತ್ತಾಗುತ್ತದೆ ಎಂದು ಸರ್ವೆ ಮಾಡಿಸಿಲ್ಲ ಎಂದರೆ ಸರಿಯಲ್ಲ.

ನಮ್ಮ ಜಮೀನಿನ ಪೂರ್ವಕ್ಕೆ ರಸ್ತೆ ಇದೆ. ನಮ್ಮ ಜಮೀನಿನ ಪೂರ್ವಕ್ಕೆ ರಸ್ತೆ ಇಲ್ಲ, ಗ್ರಾಮ ಠಾಣಾ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ತೀರ್ಪು ಋಣಿ ದಾರರು ನಾನು ಖಾತೆ ಮಾಡಿಲು ಕೊಟ್ಟ ಅರ್ಜಿಗೆ ತಕರಾರು ಸಲ್ಲಿಸಿದ್ದರಿಂದ ತೀರ್ಪು ಋಣಿ ದಾರರ ವಿರುದ್ದ ಸುಳ್ಳು ಅರ್ಜಿ ಸಲ್ಲಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಸ್ವತ್ತಿನ ಪೂರ್ವಕ್ಕೆ ಗ್ರಾಮ ಠಾಣಾ ಇದ್ದು, ದಕ್ಷಿಣಕ್ಕೆ ಸನ್ನೆಗೌಡ ಹಾಗೂ ಕರಗಮ್ಮ ರವರ ಜಮೀನು ಇದೆ ಎಂದರೆ ಸರಿಯಲ್ಲ. ಸನ್ನೆಗೌಡ ಹಾಗೂ ಕರಗಮ್ಮ ರವರು ತಮ್ಮ ಜಮೀನಿಗೆ ಕಲ್ಲು ಕಂಬ ನೆಟ್ಟಿರುತ್ತಾರೆ ಎಂದರೆ ಇತ್ತೀಚೆಗೆ ನೆಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕಲ್ಲು ಕಂಬ ನೆಟ್ಟಿರುವ ಜಾಗ ಗ್ರಾಮ ಠಾಣಾ ಎಂದರೆ ಸರಿಯಲ್ಲ.

ನನ್ನ ಅರ್ಜಿ ಹಾಗೂ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ಗೊತ್ತು. ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು, ಗ್ರಾಮ ಠಾಣಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆಒಂದು ಭಾವ ಚಿತ್ರವನ್ನು ತೋರಿಸಲಾಗಿ ಭಾವ ಚಿತ್ರದಲ್ಲಿ ಕಾಣುವ ಜಾಗ 2004 ರಿಂದಲೂ ಅದೇ ರೀತಿಯಾಗಿದೆ ಯಾವುದೇ ಬದಲಾವಣೆ ಆಗಿಲ್ಲ ಎಂದರೆ ಸರಿ. ಸಾಕ್ಷಿ ಭಾವ ಚಿತ್ರ ಒಪಿದ್ದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.